# ಕಾನನದ ಕ್ಯಾಮೆರಾ ಜೀವಿಗಳು



ಕಾಝಿರಂಗ ರಾಷ್ಟ್ರೀಯ ಉದ್ಯಾನಕ್ಕೆ ಹೋದ ಫೋಟೋಗ್ರಾಫರ್ ಅಶ್ವಿನ್ ಭಟ್ ಕ್ಯಾಮೆರಾಕ್ಕೆ ಪೋಸ್ ಕೊಟ್ಟ ಟೆರಾಪಿನ್ಸ್ ಜಾತಿಯ ಆಮೆಗ



**ಬಿ.ಕೆ. ಗಣೇಶ್**

ಮಧುಮಲೈ ದಟ್ಟ ಕಾಡಿನಲ್ಲಿ ಗಾಢ ಮೌನ. ಹಣ್ಣೆಲೆಯೊಂದು ನೆಲಕ್ಕೆ ಬಿದ್ದರೆ ತರಗೆಲೆಯೊಳಗೆ ಕೂತಿದ್ದ ಎರಣೆಯೊಂದು ಏನಾಯಿತು ಎಂದು ತಲೆ ಎತ್ತಿ ನೋಡುತ್ತದೆ. ಮರದ ಮೇಲೆ ಹಕ್ಕಿಯೊಂದು ರೆಕ್ಕೆ ಚಟಪಟಿಸಿದರೆ ಪಕ್ಕದ ಕೊಂಬೆಯಲ್ಲಿದ್ದ ಕೋತಿಯ ನಿದ್ದೆ ಭಂಗವಾಗುತ್ತದೆ. ಕಾನನದ ಕೋಟೆಯೊಳಗೆ ಮೌನದ್ದೇ ಮಾತು. ಮೌನ ಮುರಿದ ದನಿ ಕೇಳಿದರೆ ಸಾಕು ಹುಲಿ ಥಟ್ಟನೆ ನಿಂತು ಕಿವಿಕೊಡುತ್ತದೆ; ಮೊಲ ಚಂಗನೆ ಪೊದೆಗೆ ಹಾರಿ ಕಣ್ಣರಳಿಸುತ್ತದೆ; ಮಂಗ ಕಿರುಚುತ್ತದೆ; ಆಪತ್ತು ಎದುರಿಸಲು ಜಿಂಕೆ ರೆಡಿಯಾಗಿಬಿಡುತ್ತದೆ.

ಅಂಥ ಸೈಲೆಂಟ್ ದುನಿಯಾದಲ್ಲಿ ನಾಲ್ಕೈದು ದಿನಗಳಿಂದ ಈ ಹುಡುಗರು ಹೆಜ್ಜೆ ಇಡುತ್ತಿದ್ದಾರೆ. ಅದೂ ಬೆಕ್ಕಿನಷ್ಟೇ ನಾಜೂಕಾಗಿ. ಹೆಗಲ ಮೇಲೆ ಅತಿಭಾರದ ಬ್ಯಾಗ್ ಏರಿಸಿಕೊಂಡು, ಕಣ್ಣೊಳಗೇ ಕ್ಯಾಮೆರಾ ಇಟ್ಟುಕೊಂಡ ಈ ಥ್ರೀ ಫೋರ್ತ್ ಪ್ಯಾಂಟ್, ಟಿ ಶರ್ಟ್‌ನ ಈ ಹುಡುಗರಿಗೆ ಮೌನದ ಮಹಿಮೆ ಗೊತ್ತಾಗಿಬಿಟ್ಟಿದೆ. ಇಲ್ಲದಿದ್ದರೆ ಕಾಡಿನ ಜೀವಗಳ ಕಣ್ಣೊಳಗಿನ ದಾಹ, ನೋವನ್ನು ಹಿಡಿಯಲು ಇವರಿಂದ ಸಾಧ್ಯವೇ ಆಗುತ್ತಿರಲಿಲ್ಲ. ನೋಡಿದರೆ ಗೊತ್ತಾಗಿಬಿಡುತ್ತದೆ ಇವರು ಪಕ್ಕಾ ಪೇಟೆಯವರು ಅಂತ. ಸಿಟಿಯೊಳಗೆ ಮಿನರಲ್ ವಾಟರ್ ಸಿಗದಿದ್ದರೆ ನೀರೂ ಕುಡಿಯರು; ಕಂಪ್ಯೂಟರ್ ಭಾಷೆಯಲ್ಲೇ ಮಾತನಾಡುವವರು; ಸ್ಕೈಪ್‌ನಲ್ಲಿ ವಿದೇಶದ ಗೆಳೆಯರ ಜತೆ ವಾರಕ್ಕೊಮ್ಮೆ ಚಾಟ್ ಮಾಡದಿದ್ದರೆ ಏನನ್ನೋ ಕಳಕೊಂಡಂತೆ ಚಡಪಡಿಸುವವರು. ಆದರೆ ಈಗ ಅದೆಲ್ಲವನ್ನೂ ಬಿಟ್ಟು ಕಾಡಿನೊಳಗೆ ಕಾಡಿನ ಜೀವವಾಗಿಬಿಟ್ಟಿದ್ದಾರೆ. ವೀಕೆಂಡ್ ಸಿಕ್ಕರೆ ಸಾಕು– ಬೆಂಗಳೂರಿನ ಬಿಂದಾಸ್ ಯುವಕರು ಅದೆಲ್ಲೋ ಕಾಡಿಗೆ ಹೋಗಿ ಕ್ಯಾಮೆರಾಕ್ಕೆ ಕಣ್ಣು ಮಿಟುಕಿಸುತ್ತಿರುತ್ತಾರೆ. ಹಸಿರಲೋಕದ ಒಂದೊಂದು ಕ್ಷಣಗಳಿಗೂ ಬಲೆ ಹಾಕಿ ಕ್ಯಾಮೆರಾದೊಳಗೆ ಬೀಳಿಸಿಬಿಡುವ ಉತ್ಸಾಹ ಅವರದು. ಅದು ಕೆಲವರಿಗೆ ಹವ್ಯಾಸ, ಇನ್ನು ಕೆಲವರಿಗೆ ವೃತ್ತಿ.

ಭರತ್‌ಪುರದಲ್ಲಿ ಮರದ ಮೇಲೆ ಕೂತ ಚುಕ್ಕಿ ಗೂಬೆಯ ಮರಿಗಳ ಮುಗ್ಧತೆಯನ್ನು ಕ್ಲಿಕ್ಕಿಸಿ ತೃಪ್ತಿಯ ನಗೆ ನಗುತ್ತಾರೆ ಪ್ರಮೋದ್ ವಿಶ್ವನಾಥ್. ವರ್ಷಗಟ್ಟಲೆ ಸಾಫ್ಟ್‌ವೇರ್ ಜತೆ ಏಗಿದರೂ ಈ ತೃಪ್ತಿ ಅವರಿಗೆ ಸಿಗಲಿಕ್ಕಿಲ್ಲ. ಫೋಟೋಗ್ರಫಿಯನ್ನೇ ಉಸಿರಾಗಿಸಿಕೊಂಡ ಕಲ್ಯಾಣ್‌ವರ್ಮ ಝೀಬ್ರಾಗಳ ಸರಸಕ್ಕೆ ಸಾಕ್ಷಿಯಾಗಿಬಿಡುತ್ತಾರೆ; ನಾಗರಹೊಳೆಯಲ್ಲಿ ಆನೆಗಳ ಸಂಸಾರ ಪಥಸಂಚಲನ ನೋಡಿ ಅನಿಲ್ ರಂಗನಾಥ್ ರೋಮಾಂಚಿತರಾಗಿ ಬಿಡುತ್ತಾರೆ. ಮಧ್ಯಪ್ರದೇಶದ ಬಾಂದವ್‌ಗಢದಲ್ಲಿ ಎಲ್ಲರ ಕಣ್ಣು ಮರೆಸಿ ಪೊದೆಯೊಳಗೆ ಅಡಗಿ ಕುಳಿತ ಹುಲಿ ಅಮೋಘ ವರ್ಷ ಕಣ್ಣಿಗೆ ಬೀಳುತ್ತದೆ. ಸಾಗರಮಾತ ನ್ಯಾಷನಲ್ ಪಾರ್ಕ್‌ನ ಹಿಮಧಾರೆ ಶ್ರೀಹರ್ಷ ಕಣ್ಣಲ್ಲಿ ಕಲಾಕೃತಿಯಾಗಿ ರೂಪುಗೊಳ್ಳುತ್ತದೆ, ಕೂತಲ್ಲಿಗೇ ಬಂದ ಹುಲಿ ನೋಡಿ ಗೌರಿ ಬೆಚ್ಚಿಬೀಳುತ್ತಾರೆ..

ಒಂದು ಅಂದಾಜಿನ ಪ್ರಕಾರ, ಬೆಂಗಳೂರು ನಗರದಲ್ಲಿ ಸಾವಿರಕ್ಕೂ ಹೆಚ್ಚು ಮಂದಿ ಕ್ಯಾಮೆರಾದ ಹಿಂದೆ ಬಿದ್ದಿದ್ದಾರೆ. ಟೈಮ್ ಸಿಕ್ಕಾಗಲೆಲ್ಲ ಕ್ಯಾಮೆರಾ ಎತ್ತಿಕೊಂಡು ಹೊರಟೇಬಿಡುತ್ತಾರೆ... ನಿ'ಸಗ್ಗ'ದ ಮಡಿಲಿಗೆ!

### ಇದೇ ಪ್ರೊಫೆಷನ್

ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿಯಾಗಿದ್ದ ಅಮೋಘ ವರ್ಷ ಸೈಬರ್ ಲೋಕದ ಸೆಳೆತಕ್ಕೆ ಸಿಲುಕಲಿಲ್ಲ. ಥ್ರೀ ಈಡಿಯಟ್ಸ್ ಸಿನಿಮಾದ ಫರ್ಹಾ ಖಾನ್ ಥರಾನೇ ವೈಲ್ಡ್‌ಲೈಫ್ ಫೋಟೋಗ್ರಾಫರ್ ಆಗಬೇಕೆಂಬ ಕನಸು ಕಟ್ಟಿಕೊಂಡು ಯಶಸ್ವಿಯಾದರು. ಈಗ ಕಾಡು ಮೇಡು ಸುತ್ತುತ್ತಾರೆ. ನಿಸರ್ಗದ ಸೌಂದರ್ಯವನ್ನು ಸೆರೆಹಿಡಿಯುವ ವೃತ್ತಿಪರ ಛಾಯಾಗ್ರಾಹಕರಾಗಿದ್ದಾರೆ. ಪ್ರಕೃತಿ ಬಗ್ಗೆ ತಿಳಿವಳಿಕೆ, ವಿದ್ಯಾರ್ಥಿಗಳಿಗೆ ಜಾಗೃತಿ ಶಿಬಿರ ನಡೆಸುತ್ತಿದ್ದಾರೆ. ಅಸ್ಸಾಂ, ಅರುಣಾಚಲ ಪ್ರದೇಶಗಳಿಗೆ ಟೂರ್ ಮಾಡುವ ಇವರು ಲಡಾಕ್, ಶ್ರೀನಗರಗಳಿಗೆ ಒಬ್ಬರೇ ಬೈಕ್ ಪ್ರವಾಸ ಮಾಡಿದ್ದಾರೆ. ಕಾಡಿನ ಜೀವಗಳ ಫೋಟೋ ತೆಗೆಯುವುದು ಅಷ್ಟೇನೂ ಸುಲಭದ ಕೆಲಸ ಅಲ್ಲ. 'ಎಷ್ಟೋ ಸಲ ಒಂದು ಪ್ರಾಣಿಯ ಫೋಟೋ ಸಿಗಬೇಕಾದರೆ ಕಾದು ಕುಳಿತುಕೊಳ್ಳುವ ಸಂದರ್ಭ ಇದೆ. ತಾಳ್ಮೆ ಮಾತ್ರ ಸಿಕ್ಕಾಪಟ್ಟೆ ಬೇಕು' ಎಂದು ಹೇಳುತ್ತಾರೆ ಅವರು.

ಇವರ ಹಾಗೆಯೇ, ಮೆಕಾನಿಕಲ್ ಎಂಜಿನಿಯರ್ ಆಗಿದ್ದ ಕಲ್ಯಾಣ್‌ವರ್ಮ ಸಹ ವೈಲ್ಡ್‌ಲೈಫ್ ಫೋಟೋಗ್ರಫಿಯನ್ನೇ ಫುಲ್‌ಟೈಮ್ ಜಾಬ್ ಮಾಡಿಕೊಂಡಿದ್ದಾರೆ.

### ಶೂಟರ್ಸ್ ಟೀಂ

ಹಸಿರ ಫೋಟೋಗಳನ್ನು ಶೂಟ್ ಮಾಡುವ ಒಂದು ಟೀಮ್ ಬೆಂಗಳೂರಲ್ಲಿದೆ. ಲ್ಯಾಂಡ್‌ಸ್ಕೇಪ್ ವಿಝರ್ಡ್ಸ್ (www.-landscape-wizards.com) ಎಂಬ ಹೆಸರಿನ ತಂಡದಲ್ಲಿ ಐವರಿದ್ದಾರೆ. ಎಲ್ಲರೂ ಐಟಿ ಉದ್ಯೋಗಿಗಳು. ಹವ್ಯಾಸಕ್ಕೆ ಕ್ಯಾಮೆರಾ ಹಿಡಿದುಕೊಂಡಿದ್ದಾರೆ. ಎಳವೆಯಿಂದಲೇ ಫೋಟೋಗ್ರಫಿ ಆಸಕ್ತಿ ಬೆಳೆಸಿಕೊಂಡ ಪ್ರಮೋದ್ ವಿಶ್ವನಾಥ್ ಇದರ ರೂವಾರಿ. ಅನಿಲ್‌ಕುಮಾರ್ ರಂಗನಾಥ್, ಅಶ್ವಿನಿ ಕುಮಾರ್ ಭಟ್, ಶಿವಕುಮಾರ್, ಶ್ರೀಹರ್ಷ ಗಂಜಾಂ ಜತೆಗೂಡಿದ್ದಾರೆ.

'ನೇಚರ್ ಮತ್ತು ವೈಲ್ಡ್‌ಲೈಫ್ ಫೋಟೋಗ್ರಫಿಯಲ್ಲಿ ಆಸಕ್ತಿ ಇದ್ದ ಸ್ನೇಹಿತರು ನನಗೆ ಪರಿಚಯವಾದ ನಂತರ ಇಂಥದ್ದೊಂದು ಟೀಮ್ ಯಾಕೆ ಮಾಡಬಾರದು ಎಂಬ ಐಡಿಯಾ ಬಂತು. ನಿಸರ್ಗ ಹಾಗೂ ಲ್ಯಾಂಡ್‌ಸ್ಕೇಪ್ ಫೋಟೋಗ್ರಫಿಗೆ ಒತ್ತುಕೊಡುತ್ತೇವೆ. ಜಗತ್ತಿನ ಬೇರೆ ಬೇರೆ ದೇಶ, ಭಾರತದ ಬೇರೆ ಬೇರೆ ಕಡೆ ಸುತ್ತಾಡಿ ಫೋಟೋ ತೆಗೆಯುತ್ತೇವೆ. ವರ್ಷಕ್ಕೆ ನಾವು ಕನಿಷ್ಠ ಎಂಟರಿಂದ ಹತ್ತು ಟ್ರಿಪ್ ಮಾಡುತ್ತೇವೆ' ಎಂದು ಪ್ರಮೋದ್ ಹೇಳುತ್ತಾರೆ.

bkganesh@vijayanext.com

**(ಪ್ರತಿಯೊಂದು ಪ್ರಾಣಿಗಳ ಚಿತ್ರದ ಹಿಂದೆ ಅದರದ್ದೇ ಆದ ಕತೆಗಳಿರುತ್ತವೆ. ಆ ರೋಚಕ ಕತೆಗಳನ್ನು ಮುಂದಿನ ವಾರದಿಂದ ಫೋಟೊಗ್ರಾಫರ್‌ಗಳೇ ನಿಮ್ಮ ಮುಂದೆ ಇಡುತ್ತಾರೆ)**

ರಾಮನಗರದಲ್ಲಿ ಫೋಟೋಗ್ರಾಫರ್ ಪ್ರಮೋದ್ ವಿಶ್ವನಾಥ್ ತೆಗೆದ ಪರ್ಪಲ್ ಸನ್ ಬರ್ಡ್ ಚಿತ್ರ

## ಆಪ್ತಮಿತ್ರ

**ನಿಮ್ಮ ಭಾವನಾತ್ಮಕ, ಶೈಕ್ಷಣಿಕ, ಮಾನಸಿಕ ತವಕ ತಲ್ಲಣಗಳಿಗೆ ಸ್ಪಂದಿಸಿ, ಸೂಕ್ತ ಹಾದಿಯಲ್ಲಿ ಮುನ್ನಡೆಸುವ ಬಯಕೆ ನಮ್ಮದು. ಕರಿಯರ್ ಸಂಬಂಧಿ ಇಲ್ಲವೇ ನಿಮ್ಮನ್ನು ಕಾಡುತ್ತಿರುವ ಸಮಸ್ಯೆಗಳ ಕುರಿತು ನಮಗೆ ತಿಳಿಸಿ. ಆಪ್ತಮಿತ್ರ ನಿಮಗೆ ಸಲಹೆ, ಮಾರ್ಗದರ್ಶನ, ಬೆಂಬಲ, ಸಹಾಯ ನೀಡುತ್ತಾರೆ.**

**1 ನಾನು ಡಿಗ್ರಿ ಕಲಿತಿರುವೆ. ಗಗನ ಸಖಿಯಾಗುವ ಕನಸಿದೆ. ತಕ್ಕಷ್ಟು ರೂಪವತಿಯಾಗಿರುವ ನಾನು 65 ಕೇಜಿ ತೂಕ ಹೊಂದಿದ್ದೇನೆ. ಕನಸು ಕೈಗೂಡಲು ಏನು ಮಾಡಬೇಕು?**

**ಪಿ.ವಿಜಯಲಕ್ಷ್ಮಿ** | ಹಾಸನ

ಶೈಕ್ಷಣಿಕ ಕ್ವಾಲಿಫಿಕೇಷನ್ ತೃಪ್ತಿಕರವಾಗಿದೆ. ಗಗನ ಸಖಿಗೆ ಪದವಿ ಸಾಕು. ರೂಪವತಿ ಎಂದು ಹೇಳಿಕೊಂಡಿದ್ದೀರಿ. ಅದೂ ಸರಿಯೇ. ಆದರೆ ದೈಹಿಕವಾಗಿ ಸ್ಮಾರ್ಟ್ ಇದ್ದರಷ್ಟೇ ಸಾಲದು, ಬೌದ್ಧಿಕವಾಗಿಯೂ ಸ್ಮಾರ್ಟ್ ಇರಬೇಕಾಗುತ್ತೆ. ಯಾವುದಕ್ಕೂ ನೀವು ನೇರ ಅರ್ಜಿ ಹಾಕಿ ಸಂದರ್ಶನಕ್ಕೆ ಹಾಜರಾಗುವ ಬದಲು ತಕ್ಕಷ್ಟು ಪೂರ್ವ ತಯಾರಿ ಪಡೆದು ಮುಂದಿನ ಹೆಜ್ಜೆ ಇಡುವುದು ಉಚಿತ. ಬೆಂಗಳೂರಿನಲ್ಲಿ ಕ್ಯಾಬಿನ್ ಕ್ರೂ ತರಬೇತಿ ನೀಡುವ ಅನೇಕ ಸಂಸ್ಥೆಗಳಿವೆ. ಅವುಗಳ ಪೈಕಿ ಉತ್ತಮವಾದದ್ದೊಂದನ್ನು ಆಯ್ದುಕೊಂಡು ತರಬೇತಿ ಪಡೆಯುವುದು ಒಳಿತು.

**2 ನಾನು ಪಿಯು ವಿದ್ಯಾರ್ಥಿ. ಓದಿನ ಸಮಸ್ಯೆ ಇಲ್ಲ. ಆದರೆ ಈಗೀಗ ಸಿಗರೇಟ್ ಸೇದುವ ಚಟ ಅಂಟಿಕೊಂಡಿದೆ. ಇದನ್ನು ಬಿಡುವುದು ಹೇಗೆ ಸಲಹೆ ನೀಡಿ.**

**ಸತೀಶ್ ಚಂದ್ರ** | ತುಮಕೂರು

ಸಲಹೆ ಕೇಳಿ ಸಿಗರೇಟ್ ಬಿಟ್ಟ ಪುಣ್ಯಾತ್ಮರು ಕಮ್ಮಿ. ನಿಮ್ಮದು ಚಿಕ್ಕ ವಯಸ್ಸು. ಈ ಸಂದರ್ಭದಲ್ಲಿ ಸಿಗರೇಟಿನ ಸಹವಾಸ ಬೆಳೆಸಿಕೊಂಡಿರುವುದು ನಿಜಕ್ಕೂ ಖೇದಕರ. ಇದು ನಿಮ್ಮ ದೈಹಿಕ ಆರೋಗ್ಯದ ಮೇಲಷ್ಟೇ ಅಲ್ಲ ಮಾನಸಿಕ ಆರೋಗ್ಯವನ್ನೂ ಹಾಳು ಮಾಡುತ್ತದೆ. ನಿಧಾನವಾಗಿ ಓದಿಗೂ ಪೆಟ್ಟು ನೀಡುತ್ತದೆ. ಸ್ಮೋಕಿಂಗ್‌ನ ಗುಣಗಾನ ಎಷ್ಟು ಹೇಳಿದರೂ ಕಮ್ಮಿಯೇ. ಇದರಿಂದ ಕಳಚಿಕೊಳ್ಳಲು ಯಾವುದೇ ಅಡ್ಡದಾರಿಗಳಿಲ್ಲ. ಸ್ವಲ್ಪ ಕಡಿಮೆ ಅಪಾಯಕಾರಿಯಾದ ಚಟ ಬೆಳೆಸಿಕೊಂಡು ಇದನ್ನು ಬಿಟ್ಟು ಬಿಡಿ ಎಂದು ಕೆಲ ಬುದ್ಧಿವಂತರು ಸಲಹೆ ಮಾಡುವುದುಂಟು. ಇನ್ನೂ ಏನೇನೋ ಅಡ್ವೈಸ್‌ಗಳಿವೆ. ಆದರೆ ಅವ್ಯಾವೂ ವರ್ಕ್ ಆಗೊಲ್ಲ. ನೀವೇ ನಿರ್ಧರಿಸಿ, ಆರೋಗ್ಯ–ಅನಾರೋಗ್ಯ ಇವುಗಳಲ್ಲಿ ನಿಮಗೆ ಯಾವುದು ಇಷ್ಟ ಎಂದು. ಆರೋಗ್ಯ ಎನ್ನುವುದು ನಿಮ್ಮ ಆಯ್ಕೆಯಾದರೆ, ಗಟ್ಟಿ ಮನಸ್ಸು ಮಾಡಿ ಸಿಗರೇಟಿಗೆ ಶರಣು ಹೇಳಿ ಬಿಡಿ. ಒಳ್ಳೆಯದಾಗುತ್ತೆ.

**ಸಂಪರ್ಕಿಸಬೇಕಾದ ವಿಳಾಸ:**
ಸಂಪಾದಕರು, **ವಿಜಯnext**, ನಂ 40,
ಜಯಸಾಯಿ ಟವರ್ಸ್, ಸಜ್ಜನರಾವ್ ರಸ್ತೆ,
ವಿವಿಪುರಂ, ಬೆಂಗಳೂರು–04
ಇಮೇಲ್:editor@vijayanext.com

**ವೈಲ್ಡ್ ಲೈಫ್**

# ಪನ್ನಗನ ಪರದಾಟ ಪ್ರಸಂಗ!

**ಅಶ್ವಿನಿ ಕುಮಾರ ಭಟ್ಟ, ಗಾಳೀಮನೆ**



ಆಗಿನ್ನೂ ಮಳೆಗಾಲ. ಪ್ರತೀ ಮಳೆಗಾಲದಲ್ಲೂ ಪಶ್ಚಿಮ ಘಟ್ಟದ ಒಂದಿಲ್ಲೊಂದು ಭಾಗದಲ್ಲಿ ಫೊಟೊಗ್ರಫಿ ಮಾಡುವುದು ನನ್ನ ರೂಢಿ. ಆ ನಿಮಿತ್ತ ಆ ವರ್ಷ ಬನವಾಸಿ ಸಮೀಪದ ಗುಡವಿ ಪಕ್ಷಿಧಾಮಕ್ಕೆ ಹೋಗಿದ್ದೆ.

ಗುಡವಿಗೆ ಭೇಟಿ ನೀಡಿದ ಉದ್ದೇಶ ಐಬೀಸ್(ಕರಿತಲೆ ಹಕ್ಕಿ) ಹಾಗೂ ಇತರೇ ಹಕ್ಕಿಗಳನ್ನು ನನ್ನ ಕ್ಯಾಮೆರಾದಲ್ಲಿ ಕ್ಲಿಕ್ಕಿಸಲು. ಆದರೆ ಅಲ್ಲಿ ನನಗೆ ಕಂಡದ್ದು ನಿಸರ್ಗದ ಅದ್ಭುತ ವಿಸ್ಮಯ.

ಕರಿತಲೆ ಹಕ್ಕಿಯ ಚಿತ್ರ ತೆಗೆದು ವಾಪಸ್ ಹೊರಡುವಾಗ ಗಾಳಿಯಲ್ಲಿ ಏನೋ ಸರಿದಾಡಿದಂತೆ ಭಾಸವಾಗಿ ತಿರುಗಿ ನೋಡಿದೆ. ಕಾಡು ಜೇಡ, ಹುಲಿಜೇಡಗಳ ಭಯಂಕರ ಬಲೆ ಹೆಣೆದ ಆ ಪ್ರದೇಶದಲ್ಲಿ ಬಹುಶಃ ಬಳ್ಳಿಯೋ, ತೆಂಗಿನ ಗರಿಯೋ ಸಿಕ್ಕಿ ಹಾಕಿಕೊಂಡಿರಬಹುದು ಎಂದುಕೊಳ್ಳುತ್ತ, ಆದರೂ ಇರಲಿ ಸ್ವಲ್ಪ ಹತ್ತಿರದಿಂದ ನೋಡಿಬಿಡೋಣ ಎಂದು ಆ ಕಡೆ ಹೆಜ್ಜೆ ಹಾಕತೊಡಗಿದೆ. ಒಂದು ಹತ್ತು ಹೆಜ್ಜೆ ಹತ್ತಿರ ಹೋದಾಗ ಅಲ್ಲಿ ನಡೆಯುತ್ತಿದ್ದ ಘಟನೆ ನನ್ನನ್ನು ವಿಚಲಿತಗೊಳಿಸಿತು.

ಹುಲಿಜೇಡ ಹೆಣೆದ ಬಲೆಗೆ ಮಧ್ಯಮ ಗಾತ್ರದ ಹಾವೊಂದು ಸಿಕ್ಕಿ ಹಾಕಿಕೊಂಡು ಪರದಾಡುತ್ತಿತ್ತು. ಅದು ನಿಜವಾಗಿಯೂ ಹಾವೇ ಎಂದು ನನ್ನಲ್ಲೇ ನಾನು ಖಚಿತಪಡಿಸಿಕೊಳ್ಳಲು ಸ್ವಲ್ಪ ಸಮಯವನ್ನೇ ತೆಗೆದುಕೊಂಡೆ. ಜೇಡರ ಬಲೆ ಅದರಷ್ಟೇ ದಪ್ಪದ ಉಕ್ಕಿನ ತಂತಿಗಿಂತ ಹತ್ತು ಪಟ್ಟು ಗಟ್ಟಿಯಾಗಿರುತ್ತದೆ ಎಂಬುದನ್ನು ಓದಿದ್ದೆ. ಆದರೆ ಆ ಬಲೆ ಒಂದು ಹಾವನ್ನು ಹಿಡಿಯಬಲ್ಲದು ಎಂಬುದನ್ನು ಎಂದೂ ಅಂದುಕೊಂಡವನಲ್ಲ. ಹಿಂದೊಮ್ಮೆ ಮಧ್ಯ ಭಾರತದ ರಾಷ್ಟ್ರೀಯ ಉದ್ಯಾನವೊಂದರಲ್ಲಿ ಒಂದು ಪುಟ್ಟ ಹಕ್ಕಿ (ವಾರ್ಬ್ಲರ್) ಇಂತಹುದೇ ಬಲೆಗೆ ಬಿದ್ದಿದ್ದರ ಬಗ್ಗೆ ಓದಿದ್ದೆ, ಚಿತ್ರವನ್ನೂ ನೋಡಿದ್ದೆ.

ಆ ಹಾವು 'ಬ್ರೊಂಜ್ ಬ್ಯಾಕ್'. ಅದನ್ನು ಟ್ರೀ ಸ್ನೇಕ್ (ಮರ ಹಾವು) ಎಂತಲೂ ಕರೆಯುತ್ತಾರೆ. ಅದು ಮರದಿಂದ ಮರಕ್ಕೆ ಜಿಗಿಯುವುದು ಸಾಮಾನ್ಯ. ಹೀಗೇ ಜಿಗಿಯಬೇಕಾದರೆ ಅದು ಎಲ್ಲೋ ಎಡವಿ ಈ ಜೇಡರ ಬಲೆಯಲ್ಲಿ ಬಿದ್ದಿರಬಹುದು.

ಸ್ವಲ್ಪ ದೂರದಿಂದ ಹಾಗೆ ನೋಡುತ್ತ ನಿಂತೆ. ಹಾವು ಬಡಪಾಯಿ ಆಗಾಗ ಸರಿದಾಡುತ್ತಲಿತ್ತು. ಅದಕ್ಕೆ ಮೇಲೇರಿ ಬಲೆ ಕತ್ತರಿಸಲು ಸಾಧ್ಯವಾಗುತ್ತಿರಲಿಲ್ಲ. ಮೇಲಿಂದ ವಾಯುದೇವನ (ಅವ)ಕೃಪೆಯಿಂದ ಆ ಬಲೆ ಗಾಳಿಯಲ್ಲಿ ಸ್ವಲ್ಪ ಹೊಯ್ದಾಡುತ್ತಲಿತ್ತು.

ಹಾಗೇ ಕಣ್ಣನ್ನು ಮೇಲೆ ಹಾಯಿಸಿದಾಗ ಆ ಪರಿಸ್ಥಿತಿಯ ಗಾಂಭೀರ್ಯ ಜೇಡಗಳ ಸಾಮ್ರಾಜ್ಯಕ್ಕೂ ಅರಿವಾಗಿದೆ ಎಂಬುದು ಸ್ಪಷ್ಟವಾಯಿತು. ಹಾವು ತೇಲಾಡುತ್ತಿರುವ ಜಾಗಕ್ಕಿಂತ ಸುಮಾರು 6–8 ಅಡಿಗಳ ಮೇಲೆ ಹಲವು ಹುಲಿ ಜೇಡಗಳ ಸಭೆಯೇ ನಡೆಯುತ್ತಿತ್ತು. ಪ್ರತಿಯೊಂದಕ್ಕೂ ಆತಂಕ ಹಾಗೂ ಆತುರ. ಹಾವಿರುವ ತನಕ ಅವುಗಳಿಗೆ ಆಹಾರ ಇಲ್ಲ ಎನ್ನುವುದು ಖಚಿತವಾಯಿತು. ಅಲ್ಲಲ್ಲಿ ಹರಿದು ಹೋದ ಬಲೆಯನ್ನು ಮತ್ತೆ ಸರಿಯಾಗಿ ಹೊಲಿಯದ ಹೊರತೂ ತಮ್ಮ ಬೇಟೆಗೆ ಜಾಲ ಬೀಸಲು ಅಸಾಧ್ಯ! ಹಾಗಾಗಿ ಆ ಹಾವಿನಿಂದ ಮುಕ್ತಿ ಪಡೆಯುವುದು ಅವುಗಳ ಪ್ರಥಮ ಆದ್ಯತೆಯಾಗಿತ್ತು.

10 ನಿಮಿಷಗಳ ಬಳಿಕ ಜೇಡಗಳ ಸಮಾಲೊಚನೆ ಮುಗಿದ ಸೂಚನೆ ಕಂಡುಬಂತು. ಬೆಕ್ಕಿಗೆ ಗಂಟೆ ಕಟ್ಟುವವರು ಯಾರು ಎಂದು ಬಹುಶಃ ನಿರ್ಧಾರವಾದಂತೆ ಕಂಡಿತು! ಅವುಗಳಲ್ಲಿ ಒಂದು ಜೇಡ ನಿಧಾನವಾಗಿ ಹಾವು ನೇತಾಡುವ ಕಡೆ ಹೆಜ್ಜೆ ಹಾಕತೊಡಗಿತು.ಅದರ ಒಂದು ಕಾಲು ಮುರಿದಿತ್ತು. ಹಾಗಾಗಿಯೇ ಅದನ್ನು ಕಳುಹಿಸಲಾಯಿತೋ ಎಂದು ಊಹಿಸಿದೆ. ಹಾವಿಗೆ ಹಿಡಿದುಕೊಂಡಿದ್ದ ಎಳೆಗಳನ್ನು ಅದು ಪರಿಶೀಲಿಸತೊಡಗಿತು. ಆಮೇಲೆ ಏನನ್ನೋ ನಿರ್ಧರಿಸಿದಂತೆ, ಮೂರು ಸ್ವಲ್ಪ ದಪ್ಪನಾಗಿದ್ದ ಎಳೆಗಳನ್ನು ಕತ್ತರಿಸಿ ಸರಸರನೇ ಮೇಲೇರಿ ದೂರ ಸರಿದು ನಿಂತಿತು.

ಬಂಧನ ಸಡಿಲವಾದ ಅನುಭವದಿಂದ ಹಾವು ಈಗ ಸರಸರನೇ ಮೈ ಮುರಿಯತೊಡಗಿತು. ಪರಿಣಾಮವಾಗಿ ಇನ್ನೊಂದಿಷ್ಟು ಎಳೆಗಳು ತುಂಡಾಗಿ ಹಾವು ಇನ್ನೇನು ಬಿತ್ತು ಎನ್ನುವ ಸ್ಥಿತಿಗೆ ತಲುಪಿತು. ಕೂಡಲೇ ಮತ್ತೊಂದಿಷ್ಟು ಸರಿದಾಡಿ ಉಳಿದ ಎಳೆಗಳಿಂದಲೂ ಮುಕ್ತಿ ಪಡೆದು 'ಅಬ್ಬಾ! ಬದುಕಿದೆ' ಎಂಬ ಭಾವದಿಂದ ಸರಸರನೇ ಬಿದಿರಿನ ಎಳೆಗಳ ನಡುವೆ ಮಾಯವಾಯಿತು!

ಇದನ್ನೆಲ್ಲ ನೋಡುತ್ತಿದ್ದ ನಾನು ಮೂಕನಾಗಿದ್ದೆ!

(ಲೇಖಕರು ವಿಪ್ರೊ ಕಂಪೆನಿ ಉದ್ಯೋಗಿ. ಮೂಲ ಶಿರಸಿಯ ಇವರು ನಾಲ್ಕೈದು ವರ್ಷಗಳಿಂದ ಕ್ಯಾಮೆರಾ ಹುಚ್ಚು ಬೆಳೆಸಿಕೊಂಡಿದ್ದಾರೆ. ಇವರ ಬ್ಲಾಗ್: sumasuta.blogspot.com.)



ಪನ್ನಗನ ಪರದಾಟದ ಈ ಫೋಟೋಗೆ ಸ್ಯಾಂಕ್ಚುರಿ ಮ್ಯಾಗಜೀನ್ ಅವಾರ್ಡ್ ಸಿಕ್ಕಿದೆ.